3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ

**CC 948/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಕೇಶವಮೂರ್ತಿ | **C.W –7** |
| ತಂದೆಯ ಹೆಸರು | ಃ | ವಿಷಕಂಠೇಗೌಡ | **P.W –6** |
| ವಯಸ್ಸು | ಃ | 33 ವರ್ಷ | |
| ಉದ್ಯೋಗ | ಃ | ವ್ಯವಸಾಯ | **ಪ್ರಮಾಣ ವಚನ ಬೋಧಿಸಲಾಯಿತು.** |
| ವಾಸ | ಃ | ಜಿನ್ನೇನಹಳ್ಳಿ, ಹಿರಿಸಾವೆ | ದಿನಾಂಕಃ **16.02.2024** |

---

ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ಚಾ ಸಾ 1, 8 ಮತ್ತು 11 ರವರ ಪರಿಚಯವಿದೆ.

ಸಾಕ್ಷಿಗೆ ಕೃತ್ಯ ಸ್ಥಳ ಮತ್ತು ಅಮಾನತ್ತು ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ಈಗಾಗಲೇ ನಿ ಪಿ 3 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 3(ಬಿ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಹಿರಿಸಾವೆ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಿ ಪಿ 3 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ** ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ *11.07.2019*ರಂದು ಚನ್ನರಾಯಪಟ್ಟಣ ತಾಲ್ಲೂಕು, ಹಿರಿಸಾವೆ ಹೋಬಳಿ, ಜಿನ್ನೇನಹಳ್ಳಿ ಗ್ರಾಮದ ಚಾ ಸಾ *1*ರವರ ವಾಸದ ಮನೆಯ ಹಿಂಭಾಗದಲ್ಲಿ ಚಾ ಸಾ *2*ರವರು ಸ್ಥಳವನ್ನು ತೋರಿಸಿದ ಮೇರೆಗೆ ಪೋಲೀಸರು ಸಂಜೆ *05.00 – 06.00* ಗಂಟೆಯವರೆಗೆ ನನ್ನ ಮತ್ತು ಚಾ ಸಾ *1, 8* ಮತ್ತು *11*ರವರ ಸಮಯಕ್ಷಮ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ ಆ ಸಮಯದಲ್ಲಿ ಪೋಲಿಸೀರು ಒಂದು ರೀಪೀಸ್ ಪಟ್ಟಿಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂರೆ ಸರಿಯಲ್ಲ. ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ಸ್ಥಳದಲ್ಲಿಯೇ ಸಹಿ ಮಾಡಿದ್ದರೂ ಸಹ ಆರೋಪಿಗೆ ಸಹಾಯವಾಗಲೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು** – ಸಾಕ್ಷಿಯು ಪ್ರತಿಕೂಲ ಸಾಕ್ಷಿಯಾದ್ದರಿಂದ ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**Sd/-**
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ